ಶ್ರೀ ಎಂ. ಎಸ್. ಕೃಷ್ಣನ್ :—ತಾವು ತಮ್ಮ ಉತ್ತರದಲ್ಲಿ ಹೇಳಿರುವುದು ನನಗೆ ಗೊತ್ತಾಗಿದೆ.

ಶ್ರೀಮತಿ ವಿಜಯ ದೇಸಾಯಿ :—ನಿಮ್ಮ ಪಕ್ಷದವರೇ ಆಗಿರುವವರು ನನ್ನ ಕಡಗೆ ಸ್ವತಃ ಬಂದು ಹೇಳಿದ್ದಾರೆ. ತಾವು ಬೇಕಾದರೆ ಅವರಲ್ಲಿ ವಿಚಾರ ಮಾಡಿ ಆಗ ನಿಮಗೇ ಗೊತ್ತಾಗುತ್ತದೆ. ಅವರೇ ಹೇಳಿರುವಂತೆ ಅಲ್ಲಿ ಈಗ ಸುಮಾರು ಇಪ್ಪತ್ತು ಸಾವಿರ ಜನರು ಕೆಲಸಗಳನ್ನು ಮಾಡುತ್ತಿದ್ದಾರೆ ಮತ್ತು ಅಲ್ಲಿಗೆ ಈಗ ಫುಡ್‌ಗ್ರೈನ್ಸ್‌ಗಳೂ ಹೋಗುವುದರಲ್ಲಿದೆ.

Sri M. S. KRISHNAN.—I want a categorical reply from the Minister. The Hon. Member may not be knowing the full facts.

Smt. E. E. VAZ.—If any Hon. Member brings to the Notice of the Food Department, that there is shortage of foodgrains and there is no stock, the Department will take immediate action.

Sri D. DEVARAJ URS.—She has every right to say what she has come to know of things. She is coming from that particular area. She has got better right to say than Sri Krishnan.

Sri M. S. KRISHNAN.—I accept that. I am not questioning that. I except you to clarify the position better than that lady Member. The Government should come out with better answer for that. She said it is only yesterday the foodgrains have been sent. We are also M.L.As. We have also some responsibilities both for our Constituencies and also for the entire State in general. Please do not caste aspersions against me.

Sri D. DEVARAJ URS.—You are insinuating an Hon. Member by saying that she may be not knowing and all that. There is a method to approach. Every time cannot get up and say whatever you want.

ಶ್ರೀ ಕೆ. ಎಂ. ನಾಗಣ್ಣ :—ನಾನು ರೂಲ್ 146 ರ ಪ್ರಕಾರ ಒಂದು ಸೂಚನೆಯನ್ನು ತಮ್ಮ ಕಡೆಗೆ ಕಳುಹಿಸಿದ್ದೆ. ಇದನ್ನು ಜಾಗ್ರತೆ ಎಂದರೆ ನಾಳೆಯೇ ಬರಲು ಏರ್ಪಾಡು ಮಾಡ ಬೇಕೆಂದು ವಿನಂತಿ.

ಅಧ್ಯಕ್ಷರು :—ಅದು ನನ್ನ ಕಡೆಗೆ ಬಂದಿದೆ. ಅದನ್ನು ನೋಡುತ್ತೇನೆ. ತಾವು ಹೆಚ್ಚು ಪೇಳಿ ಕಳಿಯಬೇಡಿ, ಇಂದು ಇರುವ ಡಿಮ್ಯಾಂಡುಗಳ ಚರ್ಚೆ ಸಾಯಂಕಾಲ ಆರು ಗಂಟೆಗೇ ಮುಗಿಯು ಬೇಕು, ಹಾಗೆ ಆಗದೆ ಇದ್ದರೆ ಡಿಮಾಂಡುಗಳನ್ನು ನಾನು ಪೋಟಿಗೆ ಹಾಕಬೇಕಾಗುತ್ತದೆ. ಇದು ಬಹಳ ಮುಖ್ಯವಾದ ಡಿಮಾಂಡು ಎಲ್ಲರೂ ಮಾತಾಡಬೇಕೆಂದಿದ್ದಾರೆ.

Discussing Demands for grants in the L. C.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :—ಮಾನ್ಯ ಅಧ್ಯಕ್ಷರೇ ಇಂದು ಇಲ್ಲಿ ಬಂದಿರುವ ಆಹಾರದ ಇಲಾಖೆ ಬಗ್ಗೆ ಎಲ್ಲ ವಿಷಯಗಳನ್ನೂ ನಿನ್ನೆ ವಿಧಾನಪರಿಷತ್ತಿನಲ್ಲಿ ಮುಖ್ಯ ಮಂತ್ರಿಗಳು

ವಿವರವಾಗಿ ಹೇಳಿದ್ದಾರೆ, ಹಾಗೆ ಹೇಳಿರುವಾಗ ಇಲ್ಲಿ ಮತ್ತೆ ನಾವು ಕೇಳುವುದೇನಿದೆ. ಯಾವ ಡಿಮಾಂಡುಗಳು ಇಲ್ಲಿಗೆ ಬರುತ್ತವೋ ಇದು ಇಲ್ಲಿ ಚರ್ಚೆಯಾಗುವುದಕ್ಕೆ ಮುಂಚೆ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗುವುದಾದರೆ ಆದರಿಂದೇನೂ ಹೆಚ್ಚು ಪ್ರಯೋಜನವಾಗುವುದಿಲ್ಲ. ಇದರಲ್ಲಿ ಪೂರ್ತಿಯಾಗಿ ಪಾಲಿಸಿ ಸ್ಟೇಟುಮೆಂಟು ಎಂದು ಅಲ್ಲಿ ಹೇಳಿ ಎಲ್ಲಾ ವಿಚಾರಗಳಿಗೂ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಮುಗಿದ ಡಿಮಾಂಡುಗಳನ್ನು ಮತ್ತೆ ಇಲ್ಲಿ ತೆಗೆದುಕೊಂಡು ಚರ್ಚೆ ಮಾಡುವುದು ಎಂದರೆ ಅದು ಸರಿಯಲ್ಲ. ಈಗಾಗಲೆ ಅಲ್ಲಿ ಕೋಆಪರೇಷನ್ ಡಿಮಾಂಡು ಬಂದು ಮುಗಿದಿದೆ. ಇಂಡಸ್ಟ್ರಿ ಡಿಮಾಂಡು ಕೂಡ ಇಟ್ಟು ಇದರ ಚರ್ಚೆ ಹಾಗೂ ಉತ್ತರ ಮುಗಿದಿದೆ. ಇಲ್ಲಿ ಮತ್ತೆ ಇದರ ಬಗ್ಗೆ ಚರ್ಚೆ ಮಾಡುವುದು ಎಂದರೆ ನಮ್ಮ ಸಭೆಯ ಸದಸ್ಯರ ರೈಟನ್ನು ಎನ್‌ಕ್ರೋಚ್ ಮಾಡಿದಂತಾಗುವುದಿಲ್ಲವೇ ?

ಅಧ್ಯಕ್ಷರು :—ಇದೇನಾಗಿದೆ ಎಂದರೆ ನಾನು ಕೂಡ ಹಾಡಿದ್ದೇ ಹಾಡು ಕಿಸಬಾಯಿ ದಾಸ ಎನ್ನುವಂತಾಗಿದೆ. ನಾನು ಹೇಳುತ್ತಲೇ ಇದ್ದೇನೆ. ಅದನ್ನೇ ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ಪರಡ್ ಪಾಲಿಸಿ ಬಗ್ಗೆ ಸರಕಾರ ಅಲ್ಲಿ ಜವಾಬು ಕೊಟ್ಟಿದೆ ಎಂದರೆ ಈ ಮನೆಯಲ್ಲಿ ಅದು ಚರ್ಚೆಯಾಗಬಾರದು ಎಂತಲೇ ತಾವು ಹೇಳುವುದು. ಇದರಲ್ಲಿ ಆ ಮನೆ ಇಲ್ಲವೇ ಈ ಮನೆ ಎನ್ನುವುದೇನೂ ಕಾಣುತ್ತಿಲ್ಲ. ಇದರಲ್ಲಿ ಯಾವುದೇ ಒಂದು ಹಕ್ಕು ಇದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಬೇಡಿಕೆಗಳನ್ನು ಅಲ್ಲಿ ಇಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಇಲ್ಲಿ ಚರ್ಚೆಯಾಗಿರುವ ಬೇಡಿಕೆಗಳನ್ನು ಅಲ್ಲಿ ಇಟ್ಟು ಚರ್ಚೆ ಮಾಡುವುದರ ಬಗ್ಗೆ ನಾವು ಹೇಳುತ್ತಿಲ್ಲ. ಇಲ್ಲಿ ಇಂದು ಇರುವ ಆಹಾರ ಪದಾರ್ಥಗಳ ಬಗ್ಗೆ ಇದರ ಹಂಚಿಕೆ ಹಾಗೂ ವಿತರಣೆ ಬಗ್ಗೆ ಮತ್ತು ಆ ಇಲಾಖೆಗೆ ಸಂಬಧಪಟ್ಟ ಎಲ್ಲ ವಿವರಗಳನ್ನೂ ಅಲ್ಲಿ ರಿಪ್ಲೈ ಮೂಲಕ ಸರಕಾರ ಕೊಟ್ಟಿರುವುದರಿಂದ ಇಲ್ಲಿ ಚರ್ಚೆಗೆ ಏನು ಮಹತ್ವ ಬರುತ್ತದೆ ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಈಗ ಇದರಲ್ಲಿ ಉಳಿದಿರುವುದೇನಿದೆ? ಸರಕಾರ ನಮ್ಮ ಸದಸ್ಯರಿಗೆ ಇರುವ ಹಕ್ಕುಬಾಧ್ಯತೆಗಳನ್ನು ಕಸಿದುಕೊಂಡಂತೆ ಆಗುವುದಿಲ್ಲವೇ? ತಾವು ನಮಗೆ ರಕ್ಷಣೆ ಕೊಡಬೇಡವೆ? ಇದೇಕೆ ಹೀಗೆ ಮಾಡುತ್ತಾರೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ರಾಜ್ಯಾಂಗದ 196 ಮತ್ತು 197 ನೇ ಕಾಲಂನಲ್ಲಿ ಯಾವ ರೀತಿ ಆದ್ಯತೆ ಕೊಡಬೇಕೆನ್ನುವುದೂ ಇದೆ. ಇದರ ಪ್ರಕಾರ ಆದಷ್ಟೂ ಸರಕಾರ ನಮ್ಮ ಮನೆಗೆ ಆದ್ಯತೆ ಕೊಡಬೇಕು ಎಂದು ನಾವು ಹೇಳುವುದು.

2-30 P.M.

ಅಧ್ಯಕ್ಷರು :—ಯಾವ ತರಹದ ಅವಮರ್ಯಾದೆಯಾಗಿದೆ ಎಂದು ನಾನು ಭಾವಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ .—ಹಿಂದೆ ಇದರ ಬಗ್ಗೆ ನಾವು ಪ್ರಸ್ತಾಪ ಮಾಡಿದಾಗ ತಾವು ಯೋಚನೆ ಮಾಡುವುದಾಗಿ ಹೇಳಿದ್ದಿರಿ. ಆದರೂ ಕೂಡ ಅಲ್ಲಿಯೇ ಮೊದಲು ಚರ್ಚೆಯಾಗುತ್ತಿದೆ. ಅದು ಸರಿಯಲ್ಲ. ಇಲ್ಲಿಯೇ ಮೊದಲು ಚರ್ಚೆಗೆ ಬರಬೇಕೆಂಬುದು ನಮ್ಮ ಆಸೆಯಾಗಿದೆ. ಈ ಸಭೆಗೆ ಎಷ್ಟು ಆದ್ಯತೆ ಸಿಗಬೇಕೋ ಅಷ್ಟು ಸಿಗಲೇಬೇಕು. ಆದಕಾರಣ ಬಿಸಿನೆಸ ಅಡ್ವೈಸರಿ ಕಮಿಟಿಯಲ್ಲಿ ತಾವು ಮೇಲ್ಮನೆಯ ಸಭಾಪತಿಯವರ ಸಂಪರ್ಕ ಇಟ್ಟುಕೊಂಡು ಇಲ್ಲಿಯೇ ಮೊದಲು ಚರ್ಚೆಗೆ ಬರುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.